## ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1128
2) ಸದಸ್ಯರ ಹೆಸರು : ಶ್ರೀ. ಕೆ.ಎ.ತಿಪ್ಪೇಸ್ವಾಮಿ
3) ಉತ್ತರಿಸಬೇಕಾದ ದಿನಾಂಕ : 12.03.2021
4) ಉತ್ತರಿಸುವವರು : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ತುಮಕೂರು ನಗರ ಸೇರಿದಂತೆ ರಾಜ್ಯದ ಎಲ್ಲಾ ನಗರ ಮತ್ತು ಇತರೆ ಕಡೆಗೆ ಹಾದು ಹೋಗುವ ರೈಲ್ವೆ ಮಾರ್ಗಗಳ ಮೇಲ್ಸೇತುವೆ ಮತ್ತು ಕೆಳರಸ್ತೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಕೈಗೊಂಡಿರುವ ಯೋಜನೆಗಳಿಗೆ ಪೂರಕವಾಗಿ ರಾಜ್ಯ ಸರ್ಕಾರದ ಯಾವ ಕ್ರಮಗಳನ್ನು ಕೈಗೊಂಡಿದೆ. | ರಾಜ್ಯದ ಎಲ್ಲಾ ನಗರ ಮತ್ತು ಇತರೆ ಕಡೆಗೆ ಹಾದು ಹೋಗುವ ರೈಲ್ವೆ ಮಾರ್ಗಗಳ ಮೇಲ್ಸೇತುವೆ ಮತ್ತು ಕೆಳಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು 1 ಲಕ್ಷಕ್ಕೂ ಅಧಿಕ ಟಿ.ವಿ.ಯು ಎಣಿಕೆ ಇರುವ ವಾಹನ ದಟ್ಟಣೆ ಅಧಿಕವಾಗಿರುವ 55 ರೈಲ್ವೆ ಎಲ್.ಸಿ ಗೇಟ್‌ಗಳನ್ನು ತೆರವುಗೊಳಿಸಿ ಅವುಗಳ ಬದಲಿಗೆ ರಸ್ತೆ ಮೇಲ್ಸೇತುವೆ/ಕೆಳಸೇತುವೆಗಳನ್ನು ನಿರ್ಮಿಸಲು ರಾಜ್ಯ ಸರ್ಕಾರವು ರೈಲ್ವೆ ಇಲಾಖೆಯೊಂದಿಗೆ 50:50ರ ಅನುಪಾತದಲ್ಲಿ ವೆಚ್ಚ ಹಂಚಿಕೆ ಮಾಡಿಕೊಂಡು ಅನುಮೋದನೆ ನೀಡಿದೆ. ಇವುಗಳಲ್ಲಿ 9 ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದೆ. ಉಳಿದ 46 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇವುಗಳ ಒಟ್ಟು ಅಂದಾಜು ವೆಚ್ಚ ರೂ. 1176.49 ಕೋಟಿಗಳಾಗಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲು ರೂ. 683.42 ಕೋಟಿಗಳಾಗಿದೆ. ಈವರೆಗೆ ರೂ. 490.27 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |
| ಆ | ಈ ಕಾಮಗಾರಿಗಳ ಪೈಕಿ ಹಲವಾರು ಕಾಮಗಾರಿಗಳು, ಜಮೀನು ಭೂಸ್ವಾಧೀನ, ಮೂಲ ಸೌಕರ್ಯ, ಒದಗಿಸುವ ಪೈಪ್‌ಗಳ, ಕಂಬಗಳ ಸ್ಥಳಾಂತರ ಮತ್ತು ರಾಜ್ಯ –ಕೇಂದ್ರ ಸರ್ಕಾರಗಳ ಇಲಾಖೆ ಮತ್ತು ಸಂಸ್ಥೆಗಳಿಂದ ಪಡೆಯಬೇಕಾಗಿರುವ ನಿರಾಕ್ಷೇಪಣಾ ಪತ್ರಗಳ ಕೊರತೆಯಿಂದ ಮತ್ತು ರಾಜ್ಯ ಸರ್ಕಾರ ಭೂಸ್ವಾಧೀನ ವೆಚ್ಚವನ್ನು ಭರಿಸಲು ವಿಫಲವಾಗಿರುವುದರಿಂದ ನನೆಗುದಿಗೆ ಬಿದ್ದಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು) | ರಸ್ತೆ ಮೇಲ್ಸೇತುವೆ/ಕೆಳಸೇತುವೆ ಕಾಮಗಾರಿಗಳನ್ನು ರಾಜ್ಯ ಸರ್ಕಾರವು ರೈಲ್ವೆ ಇಲಾಖೆಯೊಂದಿಗೆ 50:50ರ ಅನುಪಾತದಲ್ಲಿ ವೆಚ್ಚ ಹಂಚಿಕೆ ಮಾಡಿಕೊಳ್ಳುತ್ತಿದ್ದು, ರೈಲ್ವೆ ಇಲಾಖೆಯಿಂದ ನಿರ್ಮಾಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆಯು ಕಾಲ–ಕಾಲಕ್ಕೆ ರಾಜ್ಯ ಸರ್ಕಾರಕ್ಕೆ ಅನುದಾನ ಬೇಡಿಕೆಗಾಗಿ ಸಲ್ಲಿಸಲಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. |
| ಇ | ಈ ಕಾಮಗಾರಿಗಳ ಪೈಕಿ ಯಾವ ಯಾವ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ; ಯಾವ ಯಾವ ಕಾಮಗಾರಿಗಳು ಪ್ರಗತಿಯಲ್ಲಿವೆ? (ಸಮಗ್ರ ಮಾಹಿತಿ ಒದಗಿಸುವುದು) | ಪ್ರಸ್ತುತ ರಾಜ್ಯ ಸರ್ಕಾರದವತಿಯಿಂದ ಕೈಗೆತ್ತಿಕೊಳ್ಳಲಾದ 46 ಕಾಮಗಾರಿಗಳೂ ಪ್ರಗತಿಯಲ್ಲಿದ್ದು, ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ. |

ಸಂಖ್ಯೆ: ಮೂಅಇ 55 ರಾರಾಹೆ 2021/ಇ

(ಆನಂದ್ ಸಿಂಗ್)
**ಮೂಲಸೌಲಭ್ಯ ಅಭಿವೃದ್ಧಿ ಹಾಗೂ**
**ಹಜ್ ಮತ್ತು ವಕ್ಫ್ ಸಚಿವರು**

Annexure-1

# Statement showing the on going Cost Sharing RoB/RuB Project works in Karantaka

as on ..2021 (Rs. in crores)

| Sl. No | LC No | Location | Total Estimated Cost | State Share | Amount Realeased | Balance |
|---|---|---|---|---|---|---|
| 1 | 1 | Hubballi -Kusgal | 39.69 | 19.85 | 11.52 | 8.33 |
| 2 | 3A | Chittapura, Kalaburagi | 36.33 | 22.49 | 22.30 | 0.19 |
| 3 | 7 | Bangarapete - Mariguppam | 24.79 | 12.39 | 0.57 | 11.82 |
| 4 | 16 | Kengeri - Hejjala | 23.73 | 12.51 | 0.00 | 12.51 |
| 5 | 27 | Rajanukunte - Doddaballapura | 56.9 | 28.77 | 28.76 | 0.01 |
| 6 | 32 | Doddaballapura - Oddarahalli | 45.8 | 25.26 | 25.26 | 0 |
| 7 | 32 | Bhadaravathi | 18.3 | 18.03 | 11.15 | 6.88 |
| 8 | 32 | Gadag- Hombal | 23.08 | 13.79 | 13.79 | 0.00 |
| 9 | 43 A | Bidar | 5.8 | 3.91 | 3.30 | 0.61 |
| 10 | 45 & 46 | Bidar | 2.15 | 2.15 | 0.89 | 1.26 |
| 11 | 47 | Bengaluru - Mysuru | 15.00 | 19.34 | 19.34 | 0.00 |
| 12 | 48 | Shivamogga | 16.40 | 8.93 | 8.93 | 0.00 |
| 13 | 62 & 64 | Bhagyanagar - Koppal | 35.13 | 17.57 | 25.42 | 0 |
| 14 | 83 B | Afzalpura Road near Gulabarga | 35.05 | 17.52 | 17.52 | 0 |
| 15 | Bridge No.567/1 | Jevargi Road, Kalaburagi. | 23.5 | 23.50 | 23.50 | 0.00 |
| 16 | 80 | Vijayapura Town | 26.25 | 18.01 | 18.01 | 0.00 |
| 17 | 101 | Srirangapatna - Naganahalli | 16.20 | 8.10 | 8.06 | 0.04 |
| 18 | 110 | Bellari | 18.93 | 9.66 | 6.00 | 3.66 |
| 19 | 111 | Bellari | 24.63 | 12.31 | 0.00 | 12.31 |
| 20 | 112 | Hubballi - Guntakal | 21.91 | 10.95 | 10.23 | 0.72 |
| 21 | 114 | Bellary - Sathyanarayanapet | 49.25 | 38.53 | 37.74 | 0.79 |
| 22 | 116 | Bangarapete - Maralahalli | 18.47 | 10.14 | 18.10 | 1.81 |
| 23 | 120 | Byatarayanahalli - Taykal | 23.49 | 12.68 | 0.94 | 11.74 |
| 24 | 129 | Devanagundi | 18.59 | 9.51 | 0.00 | 9.51 |
| 25 | 146 B | Mangalore | 5.16 | 2.28 | 2.28 | 0 |

| | | | | | | |
|---|---|---|---|---|---|---|
| 26 | KM 326/10-327 | Davanagere - Harihara | 19.13 | 19.13 | 17.09 | 2.04 |
| 27 | Approch road to KM 326/10-327 D-H | Davanagere - Harihara | 21.757 | 21.757 | 23.11 | -1.35 |
| 28 | 385 | Londa - Meeraj | 19.38 | 9.69 | 8.00 | 1.69 |
| 29 | 388A | Hubballi - Meeraj | 24.05 | 14.86 | 14.86 | 0 |
| 30 | 438 | Rayabhag - Chinchili | 16.42 | 8.55 | 8.55 | 0 |
| 31 | 27 & 47 | Chinnadagudihundi and Badanaguppe Mysore Chamarajanagara Section | 41.55 | 20.77 | 0.00 | 20.77 |
| 32 | Km 129/900-130/000 | Naganahalli Yard | 2.00 | 2.00 | 2.00 | 0.00 |
| 33 | 381 | Desur - Belagavi | 27.28 | 14.53 | 14.53 | 0.00 |
| 34 | 227 | Haveri | 33.85 | 17.74 | 17.74 | 0.00 |
| 35 | 102 | kuditini yard Between Hospete- Bellary station. | 26.36 | 13.18 | 13.32 | 0.14 |
| 36 | 81 | Ibrhimpura - Vijayaopura | 20.62 | 12.01 | 11.54 | 0.47 |
| 37 | 03 Km | Hassan-Sakleshpur | 45.99 | 27.70 | 18.68 | 9.02 |
| 38 | 79 | Holenarisepura -Mavinekere | 39.93 | 19.96 | 10.03 | 9.93 |
| 39 | 78 | Holenarisepura -Mavinekere | 15.57 | 7.79 | 0.00 | 7.79 |
| 40 | 84 | Tiptur Railway Station | 6.50 | 3.37 | 3.37 | 0.00 |
| 41 | 66 | Koppal -Ginegera | 23.65 | 13.13 | 3.00 | 10.13 |
| 42 | 34 | Bhadravathi-Shimoga | 25.92 | 13.46 | 3.69 | 9.77 |
| 43 | 49 | Shiomga-Kumsi | 60.76 | 21.68 | 4.34 | 17.34 |
| 44 | 52 | Shimoga-Kumsi | 29.63 | 15.31 | 2.81 | 12.50 |
| 45 | 37 | Kyatasandra Station between Bengaluru-Tumkuru Railway | 35.43 | 20.54 | 0.00 | 20.54 |
| 46 | 297 | Dharwad | 16.18 | 8.09 | 0.00 | 8.09 |
| | | Total | 1176.487 | 683.427 | 490.27 | 211.06 |